# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಸಾರ್ವಜನಿಕ ಪ್ರಕಟಣೆ

ಸಂಖ್ಯೆ : EE/MR –W/PR/15/10-11

ಆಯುಕ್ತರು ಕಛೇರಿ
ಎನ್.ಆರ್.ಚೌಕ,ಬಿ.ಬಿ.ಎಂ.ಪಿ
ಬೆಂಗಳೂರು ದಿ : 13/05/2010

**ವಿಷಯ:** ಚಿಕ್ಕಬಾಣವಾರ ರಸ್ತೆಯ ಹೆಚ್ಚುವರಿ ರಸ್ತೆ ಅಗಲೀಕರಣದ ಬಗ್ಗೆ.

**ಉಲ್ಲೇಖ:** ಆಯುಕ್ತರು ಕಛೇರಿ ಅಧಿಸೂಚನೆ ಸಂಖ್ಯೆ: EE/MR –W/PR/58/09-10 ದಿನಾಂಕ:02.09.2009

ಕರ್ನಾಟಕ ಪಟ್ಟಣ ಹಾಗೂ ಪ್ರದೇಶ ಯೋಜನಾ ಕಾಯ್ದೆ 1961 (1963ರ ಕರ್ನಾಟಕ ಕಾಯ್ದೆ 11)ರ ಪ್ರಕರಣ 14 – ಬಿ ಅಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸುತ್ತಾ ಮತ್ತು ಕರ್ನಾಟಕ ಸರ್ಕಾರದ ಪ್ರಕಟಣೆ ಸಂ.ಯುಡಿಡಿ/154/ಬಿಇಎಂ/ಆರ್‌ಯುಪಿಆರ್‌ಎ/2004 ದಿನಾಂಕ:18/01/2005 ರಲ್ಲಿನ ನಿಬಂಧನೆಗಳು ಹಾಗೂ ಷರತ್ತುಗಳ ಅನುಸಾರ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ)ಯು ಈ ಕೆಳಗಿನ ಅಂಡರ್ ಪಾಸ್ ನಿರ್ಮಾಣಕ್ಕಾಗಿ ಮತ್ತು ರಸ್ತೆ ಅಗಲೀಕರಣ ಹಾಗೂ ವರ್ಗಾಯಿಸಬಲ್ಲ ಅಭಿವೃದ್ಧಿ ಹಕ್ಕುಗಳನ್ನು ಹಸ್ತಾಂತರಿಸಲು ಗುರುತಿಸಲಾಗಿದೆಯೆಂದು ಸೂಚಿಸುತ್ತದೆ. ಹಾಗೂ ಈ ಹಿಂದೆ ಅಧಿಸೂಚನೆ ಹೊರಡಿಸದ್ದ ಚಿಕ್ಕಬಾಣವಾರ ರಸ್ತೆಯ ಅಗಲೀಕರಣಕ್ಕೆ ಈ ಕೆಳಗಿನಂತೆ ಹೆಚ್ಚುವರಿ ಪ್ರಕಟಣೆ ಹೊರಡಿಸಲಾಗಿದೆ.

| ಕ್ರ.ಸಂ | ರಸ್ತೆಯ ಹೆಸರು | ಇಂದ | ವಯಾ | ವರೆಗೆ | ಉದ್ದ ಕಿ.ಮೀ ಗಳಲ್ಲಿ | ಅಗಲ ಮೀಟರ್ ಗಳಲ್ಲಿ |
|---|---|---|---|---|---|---|
| 1 | ಚಿಕ್ಕಬಾಣವಾರ ರಸ್ತೆಯ ಹೆಚ್ಚುವರಿ ರಸ್ತೆ | ಜಾಲಹಳ್ಳಿ ಮುಖ್ಯ ರಸ್ತೆಯ ಶೆಟ್ಟಿಹಳ್ಳಿ, ಚಿಕ್ಕಬಾಣವಾರ ಕ್ರಾಸ್ ನಿಂದ | ಶೆಟ್ಟಿಹಳ್ಳಿಕ್ರಾಸ್, ಶೆಟ್ಟಿಹಳ್ಳಿ, ಗ್ರಾಮದ ಗಡಿ ಭಾಗದಲ್ಲಿ (ವಾಯುದಳದ ನಿಷೇಧಿತ ಪ್ರದೇಶದಪಕ್ಕದಲ್ಲಿ) ಹಾದು ರೈಲ್ವೆ ಹಳಿಯ ಪಕ್ಕದಲ್ಲಿ. | ಚಿಕ್ಕಬಾಣವಾರ ಮುಖ್ಯರಸ್ತೆಯ ಶೆಟ್ಟಿಹಳ್ಳಿ ಹತ್ತಿರ ರೈಲ್ವೆ ಲೆವೆಲ್‌ಕ್ರಾಸಿಂಗ್ ವರೆಗೆ. | 2.50 | 24.00 |

ಮೇಲಿನ ರಸ್ತೆಯ ಎರಡು ಬದಿತಯಲ್ಲಿರುವ ರಸ್ತೆ ಅಗಲೀಕರಣಕ್ಕೆ ಅಗತ್ಯವಾದ ಜಮೀನಿನ ಆಸ್ತಿ ಮಾಲೀಕರು/ಭೋಗ್ಯದಾರರು ವರ್ಗಾಯಿಸಬಲ್ಲ ಅಭಿವೃದ್ಧಿ ಹಕ್ಕುಗಳು ಹಸ್ತಾಂತರಕ್ಕಾಗಿ ಆಯುಕ್ತರು. ಬಿಬಿಎಂಪಿ ಇವರಿಗೆ ಪ್ರಕಟಣೆ ಯುಡಿಡಿ/ಬಿಇಎಂ/ಆರ್‌ಯುಪಿಆರ್‌ಎ/2004 ದಿನಾಂಕ:18/01/2005ರ ನಿಬಂಧನೆಗಳು ಹಾಗು ಷರತ್ತುಗಳ ಅನುಸಾರ ಅರ್ಜಿ ಸಲ್ಲಿಸಬಹುದು.

ಸಹಿ
ಆಯುಕ್ತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,
ಬೆಂಗಳೂರು.